ಬಂದಿತ್ತು. ನನ್ನ ಪಾಲಿಗೆ ಅವರೇ ದೇವ್ರು. 'ನಾನು ನೋಡೊದು ಬ್ಯಾಡ ಅಮ್ಮ. ನಿಮ್ಗೆ ಸರಿ ಅನಿಸಿದರೆ ಸಾಕು' ಅಂತ. ಸೀತಮ್ಮ ನಕ್ಕು 'ಅಲ್ವೊ ಮದ್ವೆ ಆಗೋನು ನೀನಲ್ವಾ? ನೀನೇ ನೋಡು. ಈಗ ನಾನು ಹೇಳ್ದಾಗೇ ಕೇಳ್ತಿ. ಮದ್ವೆ ಆದ ಮೇಲೆ ಹೆಂಡ್ತಿ ಹೇಳಿದ್ದು ಕೇಳ್ತಿ'. ಅಂದು ನಾನು ಗಂಟಲುಬ್ಬಿ ಹೇಳಿದ್ದೆ,'ಇಲ್ಲಮ್ಮ ಯಾವಾಗ್ಲೂ ನಿಮ್ಮಾತೇ ಕೇಳೂದು. ನಿಮ್ಮಾತು ಕೇಳೂ ಅಂತವಳನ್ನ ನೀವೇ ಆರಿಸಿಬಿಡಿ' ಅಂತ. ಸೀತಮ್ಮ ಮೀನಾಕ್ಷಿನ ಒಂದಿನ ಅವರ ಮನೆಗೆ ಕರೆಸಿ ನಂಗೆ ತೋರಿಸಿದ್ರು. ನನ್ನ ನೋಡೋಕು ನಾಚಿ ತಲೆ ತಗ್ಗಿಸಿ ಕೂತ ಮೀನಾನ್ನ ಕಂಡು ನಂಗೆ ಅವಳು ಒಪ್ಪಿಗೆ ಆಗಿದ್ಲು. ನನ್ನ ಕಣ್ಣಿಗಂತೂ ಮೀನಾ ರತಿಯೆ. ನನ್ನ ಒಪ್ಪಿಗೆ ತಿಳಿದ ಮೇಲೆ ಸೀತಮ್ಮ ವಿಷಯವನ್ನು ಯಜಮಾನರಿಗೆ ಮುಟ್ಟಿಸಿದರು. ನಾನು ಬೆಳಿಗ್ಗೆ ತೋಟಕ್ಕೆ ಹೋದಾಗ ವೆಂಕಪ್ಪ ಅಲ್ಲಿಗೆ ಬಂದಿದ್ರು. ಮನೆಯಿಂದ ತೋಟಕ್ಕೆ ಒಂದೇ ಫರ್ಲಾಂಗ್ ಆದರೂ ನಾನು ತೋಟದ ಮೇಲ್ವಿಚಾರ ನೋಡಲು ಶುರು ಮಾಡಿದ ಮೇಲೆ ವೆಂಕಪ್ಪನವರು ಅಲ್ಲಿಗೆ ಬಂದುದು ಇಲ್ಲವೆಂದರೂ ಆದೀತು. ಬಂದವರೆ ತೆಂಗಿನ ಗಿಡಕ್ಕೆ ನೀರು ಹಾಕುತ್ತಿದ್ದ ನನ್ನ ಬಳಿಗೆ ಬಂದರು. 'ಏನೊ ಸುಬ್ಬು ಮದ್ವೆ ಆಗ್ತೀಯಂತೆ ಹೌದಾ' ಅಂದರು. ನಂಗೆ ಅವರೆದಿರು ನಿಂತು ಮಾತನಾಡಲೇ ಭಯ. ಇದಂತೂ ನನ್ನ ಸ್ವಂತ ವಿಷಯ. ಸುಮ್ಮನೆ ನಿಂತೆ. ಅವರೇ 'ಆಗು ಆಗು. ನೋಡು ಇಲ್ಲೆ ಒಂದು ಮನೆ ಹೇಗೂ ಇದೆ. ಅದ್ಕೆ ರಿಪೇರಿ ಮಾಡಿಸಿ ಕೊಡ್ತೀನಿ. ತೋಟಕ್ಕೆ ಹತ್ರ ಜನ ಇದ್ದ ಹಾಗೂ ಆಯ್ತು. ನಿಂಗೂ ಇರೂಕೆ ಒಂದು ಜಾಗಾನೂ ಆಯ್ತು' ಅಂದರು.

ಒಂದು ವಾರದಲ್ಲೇ ಮದುವೆಯೂ ಮುಗಿದಿತ್ತು. ವಿಜೃಂಭಣೆ ಅನ್ನೋಕೆ ನಂಗೇನು ಬಂಧೂನೆ, ಬಳಗಾನೆ. ನನ್ನ ಬಂಧು ಬಳಗ ಎಲ್ಲಾ ವೆಂಕಪ್ಪ, ಸೀತಮ್ಮ ಹಾಗೂ ಲಿಲ್ಲಿ. ಲಿಲ್ಲಿ ಎರಡು ದಿನ ಕಾಲೇಜಿಗೆ ಚಕ್ಕರ್ ಹೊಡೆದು ಬಂದಿದ್ದಳು. ಎಲ್ಲಕ್ಕೂ ಸ್ವಂತ ತಂಗಿ ಹಾಗೆ ಓಡಾಡಿದಳು. ನನ್ನ ಮೀನಾನ್ನ ಗೋಳು ಹೊಯ್ದು ಕೊಂಡರು. ಎಂಟು ದಿನಗಳಲ್ಲೇ ನನ್ನ ಸಂಸಾರ ಶುರುವಾಗಿ ಬಿಟ್ಟಿತ್ತು. ಸೀತಮ್ಮನೆ ನಿಂತು ಸಂಸಾರಕ್ಕೆ ಬೇಕಾದ ಎಲ್ಲಾ ಸಾಮಾನನ್ನೂ ಅಣಿ ಮಾಡಿ ಕೊಟ್ಟರು. ಮೀನಾನ್ನು ಕರೆತರಲೂ ಅವರೇ ಹೋದರು. ಆ ಮನೆಯಿಂದ ಹೊರಡುವಾಗ ತುಂಬಾ ದುಃಖವಾಯಿತು. ಸೀತಮ್ಮ ಕಣ್ಣಿನಲ್ಲೂ ನೀರು ಬಂದಿತ್ತು. ನನ್ನದಾದ ಆಸ್ತಿ ಹಾಸಿಗೆ ಟ್ರಂಕ್ ತೆಗೆದುಕೊಂಡು ಭಾರವಾದ ಮನಸ್ಸಿನಿಂದ ನನ್ನ ಮನೆಗೆ ಬಂದೆ.

ಮೀನಾ ಬಂದ ನಂತರ ನನ್ನ ನೋವು ಹಾರಿಹೋಗಿತ್ತು. ವೆಂಕಪ್ಪನವರು ದೂರದೃಷ್ಟಿಯಿಂದ ನನಗೆಂದು ನಿಗದಿಯಾದ ಸಂಬಳವೆಲ್ಲಾ ಬ್ಯಾಂಕಿಗೆ ಹಾಕಿದ್ದರಂತೆ. ನಾನು ಅದರ ಬಗ್ಗೆ ತಲೆಕೆಡಿಸಿಕೊಂಡವನಲ್ಲ. ನಮ್ಮ ಪುಟ್ಟ ಮನೆಗೆ ವೆಂಕಪ್ಪನವರೇ ಬಂದು ಹೇಳಿದ್ದರು,'ನೋಡು ಸುಬ್ಬಣ್ಣಾ ನೀನಿನ್ನು ಸಂಸಾರಸ್ಥ. ಸಂಸಾರ ಬೇಳೀತ್ತೆ. ಇನ್ನು ಬರುವ ಸಂಬಳದಲ್ಲೇ ಜೀವನ ಮಾಡಿ.ಬ್ಯಾಂಕಿನ ಹಣ ಹಾಗೇ ಇರಲಿ' ಅಂದಿದ್ದರು. ಮೀನಾ ನನಗೆ ತಕ್ಕ ಹೆಂಡತಿ, ನಮ್ಮ ಸಂಸಾರ ಪ್ರಾರಂಭವಾಗಿತ್ತು. ನಾನು ಬೆಳಿಗ್ಗೆ ಕಾಫಿ, ತಿಂಡಿ ಮುಗಿಸಿ ದೊಡ್ಡ ಮನೆಗೆ ಹೋಗುತ್ತಿದ್ದೆ. ಅಲ್ಲಿಯ ಪೂಜೆ ಇತರ ಕೆಲಸ ಮುಗಿಸಿ ಬರುವಾಗ ಸೀತ ನನಗಾಗಿ ಕಾಯುತ್ತಿದ್ದಳು. ಊಟ ತಿಂಡಿ ಎಲ್ಲಾ ಒಟ್ಟಿಗೆ ಮಾಡುತ್ತಿದ್ದೆವು. ಒಂದು ವರ್ಷದಲ್ಲೆ ನನ್ನ ಮೀನಾ ಗರ್ಭಿಣಿಯಾಗಿದ್ದಳು. ನನಗಂತೂ ಆಗುತ್ತಿದ್ದ ಸಂತೋಷದಲ್ಲಿ ದಿನ ಸರಿಯುವುದೇ ತಿಳಿಯುತ್ತಿರಲಿಲ್ಲ.

ಈಗೀಗ ಲಿಲ್ಲಿ ತುಂಬಾ ಬದಲಾಗಿದ್ದಳು. ಮಾತೂ ಕಮ್ಮಿ. ಏನೋ ಯೋಚಿಸುತ್ತಾ ಒಬ್ಬಳೇ ಕೂತುಬಿಡುತ್ತಿದ್ದಳು. ನಂಗೆ ಅವಳು ದೊಡ್ಡ ಡಾಕ್ಟರ್ ಆಗುವವಳು. ನಮ್ಮನ್ನೆಲ್ಲಾ ನೋಡಿದರೆ ತಾತ್ಸಾರ ಅನಿಸುತ್ತಿತ್ತು. ಆದರೂ ಲಿಲ್ಲಿಗೆ ತನ್ನ ಮೇಲೆ ಅಣ್ಣನ ವಾತ್ಸಲ್ಯ ಇದೆ ಎಂದು ನಂಬಿಕೆ ದೃಢವಾಗಿತ್ತು. ಒಮ್ಮೆ ಬಂದವಳು ಮೀನಾನ್ನ ತಾನೇ ಪರೀಕ್ಷಿಸಿ ಟಾನಿಕ್ ತರಿಸಿ ಕೊಟ್ಟಿದ್ದಳು.

ಮೀನಾಗೆ ಗಂಡು ಮಗು ಆಗಬೇಕೆಂದಿತ್ತು. ನನಗೂ ಅಷ್ಟೆ. ಮೀನಾಳ ದಿನ ಕಳೆದು ಹೆರಿಗೆ ನೋವು ಶುರುವಾಯ್ತು. ನಾನು ಅಮ್ಮನಲ್ಲಿ ಓಡಿದೆ. ಅವರೂ ಬಂದರು ಯಾವ ನರ್ಸ್ ಸಹ ಬೇಡವಾಯ್ತು. ಮೀನಾ ಗಂಡು ಮಗುವಿನ ತಾಯಿ ಆದಳು. ನನ್ನ ಸಂತೋಷದ ಆ ದಿನಗಳ ನೆನಕೆಯೇ ಸಾಕು ಈ ನೋವು ಮರೆಯಲು. ಮಗು ಚಂದ್ರು ತಾಯಿಯಂತೆಯೇ ಅವನನ್ನು ಎತ್ತಿಕೊತರೆ ನನಗೆ ಕೆಳಗಿಳಿಸಲೇ ಆಗುತ್ತಿರಲಿಲ್ಲ. ಮೀನಾನೇ ದೊಡ್ಡಮನೆಗೆ ಹೋಗೋಕೆ ಎಚ್ಚರಿಸಿ ಕಳಿಸುತ್ತಿದ್ದಳು. ಮಗುವಿನ ಹುಟ್ಟುಹಬ್ಬಕ್ಕೆ ಲಿಲ್ಲಿ ಬಂದಿದ್ದಳು. ಒಂದು ಉಂಗುರ ಕೊಟ್ಟಳು. ಎತ್ತಿ ಮುದ್ದಾಡಿದಳು. ಚಂದ್ರೂ ನೆಡಿಹಂಗೆ ಆದಾಗ ಅವನ್ನ ದೊಡ್ಡ ಮನೆಗೆ ಆಗಾಗ ನಾನು ಕರಕೊಂಡು ಹೋಗ್ತಿದ್ದೆ.

ಚಂದ್ರು ಹುಟ್ಟಿದಾಗಲಿಂದ ನನ್ನ ವರ್ತನೆಯಲ್ಲಿ ಏನೋ ಬದಲಾವಣೆ ಆಗುತ್ತಿತ್ತು. ನನ್ನದು ಅನ್ನುವ ಸ್ವಾರ್ಥ. ನನ್ನ ಮಗ ಹಾಗೆ ಬಾಳಬೇಕು ದೊಡ್ಡ ಮನೆಯಂತಾ ಮನೇಲಿರಬೇಕು. ಲಿಲ್ಲಿಹಾಗೇ ಡಾಕ್ಟರ್ ಆಗಬೇಕು. ಎಂದೆಲ್ಲಾ ಆಸೆ ಕನಸುಗಳು ಮೂಡುತ್ತಿತ್ತು. ಎಷ್ಟೋ ಸಾರಿ ನಾನು ಕೆಲಸ ಮಾಡುವಾಗ ಮೊದಲಿನಂತೆ ಇದು ನನ್ನದೆ ಎಂಬ ಭಾವನೆ ಬರುತ್ತಿರಲಿಲ್ಲ. ಮೆಲ್ಲಗೆ ನನ್ನ ಮನಸ್ಸಿನಲ್ಲಿ ಸ್ವಾರ್ಥದ ಸೈತಾನ ಆಕ್ರಮಿಸುತ್ತಿದ್ದ. ಆದರೆ ದೊಡ್ಡಮನೆಯಲ್ಲಿ ನನ್ನ ಮೇಲೆ ಅವರಿಟ್ಟಿದ್ದ ನಂಬಿಕೆ, ಪ್ರೀತಿ, ವಿಶ್ವಾಸ ಮೊದಲಿನಂತೇ ಇದ್ದವು.

ಒಂದಿನ ಬೆಳಿಗ್ಗೆ ಅವರ ಮನೆಗೆ ಹೋದಾಗ ಲಿಲ್ಲಿ ಬಂದಿದ್ದಳು. ರಾತ್ರಿಯೇ ಬಂದಿದ್ದಳೇನೊ. ನಾನು ಹೋದಾಗ ಅವರ ಮನೆಯಲ್ಲಿ ವೆಂಕಪ್ಪನವರ ಕೂಗಾಟ ಜೋರಾಗಿ ಕೇಳುತ್ತಿತ್ತು. ಎಂದೂ ಗಟ್ಟಿ ಮಾತಾಡದ ಅವರು ಕೂಗುವುದೆಂದರೆ ಏನೊ ಅನಾಹುತ ನಡೆದಿದೆ ಅನಿಸಿತು. ಸೀತಮ್ಮ ಅಳುತ್ತಿದ್ದರು. ಲಿಲ್ಲಿ ನಿಶ್ಚಲಳಾಗಿ ನಿಂತಿದ್ದಳು. ನನಗೆ ಏನೂ ತಿಳೀಲಿಲ್ಲ. ಕೇಳಲೂ ಭಯ. ನನ್ನ ಕೆಲಸ ಮುಗಿಸಿ ಸಂಜೆ ಮನೆಗೆ ಬಂದಾಗ ಮೀನಾ ಹೇಳಿದಳು. ಅಮ್ಮ ಅವಳಿಗೆ ಹೇಳಿ ಅತ್ತರಂತೆ. ಲಿಲ್ಲಿ ಓದುತ್ತಿದ್ದ ಕಾಲೇಜಿನಲ್ಲಿ ಅವಳ ಜೊತೆಯಲ್ಲಿ ಓದುವ ಒಬ್ಬ ಹುಡುಗನನ್ನು ಪ್ರೀತಿಸಿದ್ದಾಳಂತೆ. ಅವನು ಬೇರೆ ಜಾತಿಯವನು. ತುಂಬಾ ಬಡವನಂತೆ. 'ಈ ಮದುವೆ ನಡೆಯಲು ನಾನು ಇರುವವರೆಗೂ ಬಿಡುವುದಿಲ್ಲ. ನೀನು ಆಗುವುದೇ ಆದರೆ ಈ ಮನೆಯಲ್ಲಿ ನಿನಗೆ ಸ್ಥಾನವಿಲ್ಲ. ನಿನಗೆ ಒಂದು ಪೈಸೆಯೂ ಕೊಡುವುದಿಲ್ಲ' ಎಂದಿದ್ದರಂತೆ, ಲಿಲ್ಲಿ ತಂದೆ. ಸೀತಮ್ಮನವರದು ಹೆಂಗರಳು. ಮಗಳು ಸುಖವಾಗಿದ್ದರೆ ಸಾಕು.'ಇವರದ್ದು ಹೀಗೆ ಹಠ. ಅವಳು ನಾನು ಅವನನ್ನೆ ಮದುವೆ ಆಗೂದೂ ಅಂತಾಳೆ. ನಂಗೆ ಸಾವು ಬಂದರೆ ಸಾಕು' ಅಂತ ಅತ್ತರಂತೆ. ನಂಗೆ ಆ ದಿನ ಲಿಲ್ಲಿಯ ಮೇಲೆ ಅಸಾಧ್ಯ ಕೋಪ ಬಂದಿತ್ತು. ಅಮ್ಮನ ಕಣ್ಣಲ್ಲಿ ನೀರು ಹಾಕಿಸಿದಳಲ್ಲ ಅವಳನ್ನು ಮನಸ್ಸಲ್ಲೆ ಶಪಿಸಿದ್ದೆ.

ಮುಂದೆ ಆ ಮನೆಯಲ್ಲಿ ಸ್ಮಶಾನ ಮೌನ. ಹೋಗೋಕೆ ರಗಳೆಯಾಗುತ್ತಿತ್ತು. ಅಮ್ಮನಂತೂ ತುಂಬಾ ಕೊರಗುತ್ತಿದ್ದರು. ಲಿಲ್ಲಿ ಮಾತ್ರ ಸ್ಥಿತ ಪ್ರಜ್ಞೆಯಂತಿದ್ದಳು. ಅವಳು ಏನು ಯೊಚಿಸಿದ್ದಳೊ ಅಂತೂ ನಿರ್ಧಾರದ ಕಳೆ ಮುಖದಲ್ಲಿತ್ತು. ಹದಿನೈದು ದಿನ ಕಳೆದಿರಬಹುದು. ಒಂದಿನ ನಾನು ಅವರ ಮನೆಗೆ ಹೋದಾಗ ಅಮ್ಮ ತಲೆನೋವೆಂದು ಮಲಗಿದ್ದರು. ಆ ದಿನ ಹಸುಗಳಿಗೆ ಹುಲ್ಲು ಹಾಕುವ ಕೆಲಸ ನನ್ನ ಪಾಲಿಗೆ ಬಂತು. ಅಟ್ಟ ಹತ್ತಿದೆ. ಹುಲ್ಲು ಚೆಲ್ಲಾಪಿಲ್ಲಿಯಾಗಿತ್ತು. ಸ್ವಲ್ಪ ಸರಿಸಿ ಇಡುವ ಅಂತ ಯೋಚಿಸಿ ಹುಲ್ಲನ್ನು ಒಂದು ಕಡೆ ಪೇರಿಸತೊಡಗಿದೆ. ಆಗ ಕೈಗೆ ಏನೂ ತಗುಲಿದ ಅನುಭವವಾಯ್ತು. ತೆಗೆದು ನೋಡಿದೆ ಒಂದು ಕಿಟ್‌ಬ್ಯಾಗ್ ಸಿಕ್ಕಿತು. ನಿಧಾನವಾಗಿ ಅದರ ಜಿಪ್ ಸರಿಸಿದೆ. ಯಾರೂ ಬರಲಾರರೆಂಬ ಭರವಸೆಯಿತ್ತು. ಅಮ್ಮ ಮಲಗಿದ್ದರು. ಲಿಲ್ಲಿ ಎದಿರು ಮನೆಗೆ ಹೋಗಿದ್ದಳು. ಚೀಲದಲ್ಲಿ ಲಿಲ್ಲಿಯ ಸೀರೆಗಳು ತುಂಬಿದ್ದವು. ಮಧ್ಯದಲ್ಲಿ ಒಂದು ಮರದ ಪೆಟ್ಟಿಗೆಯಿತ್ತು. ತೆಗೆದು ನೋಡಿದೆ. ಅದರಲ್ಲಿ ಹಳೆಯ ಒಡವೆಗಳು ತುಂಬಿದ್ದವು. ಎಲ್ಲವೂ ಅಮ್ಮನದು. ಕೆಲವು ಪವನ್ನಳಿದ್ದವು. ನನಗಾದ ಆಶ್ಚರ್ಯಕ್ಕೆ ಮಿತಿಯಿಲ್ಲ. ನೋಡಿದ ಆ ಕ್ಷಣದಲ್ಲಿ ನನ್ನ ಸೈತಾನ ಜಾಗೃತನಾದ. ಕ್ಷಣದಲ್ಲಿ ನಡೆದಿದ್ದು ಊಹಿಸಿದೆ. ಲಿಲ್ಲಿ ಪರಾರಿಯಾಗುವವಳಿದ್ದಳು. ನನಗಾಗ ಮೈಮೇಲೆ ಪ್ರಜ್ಞೆ ಇರಲಿಲ್ಲ. ಒಡವೆಯ ಕಂಡಾಗ ನನ್ನ ಚಂದ್ರು ಮಹಡಿ ಮನೆಯಲ್ಲಿ ವಾಸಿಸಲು, ಅವನು ಡಾಕ್ಟರ್ ಆಗಲು ಇದು ಬೇಕೇ ಬೇಕು ಅನಿಸಿತು. ಆಗಲೇ ನನ್ನಲ್ಲಿ ಈ ಒಳಗಿನವ ಉದ್ಭವಿಸಿದ್ದು. ಅವನು ಕೂಗಿದ

## ಚುಕ್ಕಿಗಳು

ನಸುಕ ನೀಲಿಮದಲ್ಲಿ
ನೆನಪುಗಳ ಬರೆದು ಬಚ್ಚಿಟ್ಟೆ
ಸಂಜೆ ಹೊತ್ತಿನಲಿ
ಚುಕ್ಕಿಗಳಾಗಿ
ಮಿನುಗುತ್ತಿದ್ದವು
ಬಾನತುಂಬ!

★ ಭಾಗ್ಯಲಕ್ಷ್ಮಿ ಬೆಂಡೆಹಕ್ಕಲು

